# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ 34/2025

**ಪಿ.ಡಬ್ಲ್ಯೂಃ 3(ಸಿಡಬ್ಲ್ಯೂಃ2 )**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ಮಾರುತಿ** |
| **ತಂದೆಯ ಹೆಸರು** | : | **ನರಸಪ್ಪ** |
| **ವಯಸ್ಸು** | : | **28 ವರ್ಷ** |
| **ಕೆಲಸ** | : | **ವ್ಯವಸಾಯ** |
| **ವಾಸ ಸ್ಥಳ** | : | **ಕುರುವಳ್ಳಿ ಗ್ರಾಮ** |

**ಸಾಕ್ಷಿಯನ್ನು ದಿನಾಂಕ 08.01.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಈಗ್ಗೆ 1 ವರ್ಷದ ಹಿಂದೆ ಪೊಲೀಸರು ಮೂಕಮ್ಮ ರವರ ಮನೆಯ ಹತ್ತಿರ ಪಂಚನಾಮೆ ಮಾಡಲು ಬಂದಿದ್ದರು. ಆ ಸಮಯದಲ್ಲಿ ನಾನು ಮತ್ತು ಮುನ್ನಾಬಾಯಿ ಇದ್ದರು. ಪೊಲೀಸರು ಮಃ1.30 ಗಂಟೆಗೆ ಮೂಕಮ್ಮಳ ಮನೆಯ ಹತ್ತಿರ ಬಂದಿದ್ದು ಮಃ2.30 ಗಂಟೆ ವರೆಗೆ ಸ್ಥಳದಲ್ಲಿ ಇದ್ದರು. ಪಂಚನಾಮೆಯನ್ನು **ನಿಪಿ.7** ಎಂದು ಸಾಕ್ಷಿಯ ಸಹಿಯನ್ನು **ನಿಪಿ.7 ಎ** ಎಂದು ಗುರುತಿಸಲಾಯಿತು. ಪೊಲೀಸರು ಫಿರ್ಯಾದಿದಾರರ ಮನೆಯ ಹತ್ತಿರ ಮೂಕಮ್ಮಳ ಸೀರೆ ಮತ್ತು ಕುಪ್ಪಸ ತೆಗೆದುಕೊಂಡರು. ಅವುಗಳನ್ನು

ಗುರುತಿಸುತ್ತೇನೆ. ಸೀರೆ ಮತ್ತು ಕುಪ್ಪಸವನ್ನು ಈಗಾಗಲೇ ಎಂಒ 3 ಮತ್ತು 4 ಎಂದು ಗುರುತಿಸಲಾಗಿದೆ . ಎಂಒ 3 ಮತ್ತು 4 ಪ್ಯಾಕೆಟ್ ನ ಮೇಲೆ ನನ್ನ ಸಹಿ ಕಂಡು ಬರುತ್ತದೆ. ಪಂಚನಾಮೆ ಕಾಲಕ್ಕೆ ಫೋಟೋ ತೆಗೆದಿದ್ದಾರೆ. ಸದರಿ ಫೋಟೋಗಳನ್ನು **ನಿಪಿ.8** ಎಂದು ಗುರುತಿಸಲಾಯಿತು. ಫೋಟೋದಲ್ಲಿ ನಾನು , ಮುನ್ನಾಬಾಯಿ ಮತ್ತು ಪೊಲೀಸರು ಕಂಡು ಬರುತ್ತೇವೆ. ಫೋಟೋ ದಲ್ಲಿ ಸೀರೆ ಮತ್ತು ಕುಪ್ಪಸ ಕಾಣುತ್ತದೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಹೆಚ್.ಆರ್.ಜೆ. (ಎಲ್.ಎ.ಡಿ.ಸಿ) ವಕೀಲರಿಂದ:</u>**

**2.** ನನಗೆ ಮೂಕಮ್ಮಳ ಪರಿಚಯ ಇದೆ. ಆಕೆ ನನ್ನ ನೆರೆ ಮನೆಯವಳು. ಪಂಚನಾಮೆ ಬರೆದ ದಿನಾಂಕ ಹೇಳಲು ಆಗುವುದಿಲ್ಲ. ಪೊಲೀಸರು ಪಂಚನಾಮೆ ಮಾಡಲು ಮೂಕಮ್ಮಳ ಮನೆಯ ಹತ್ತಿರ ಬಂದಿದ್ದಾಗ ನಾನು ಸಹ ಅಲ್ಲಿಗ ಹೋಗಿದ್ದೇನೆ. ನಾನು ಅಲ್ಲೆ ಇದ್ದುದ್ದರಿಂದ ಪೊಲೀಸರು ನನಗೆ ಸಹಿ ಮಾಡಲು ಹೇಳಿರುತ್ತಾರೆ. ನನಗೆ ಓದಲು ಬರೆಯಲು ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಪಂಚನಾಮೆ ಬರೆದಿದ್ದಾರೆ. ಪಂಚನಾಮೆಯಲ್ಲಿ ಬರೆದಿರುವ ವಿಷಯಗಳನ್ನು ನನಗೆ ಓದಿ ಹೇಳಿಲ್ಲ.

**3.** ಬಟ್ಟೆಗಳು ಮೊದಲೇ ಪೊಲೀಸರ ಸ್ವಾಧೀನದಲ್ಲಿ ಇತ್ತು ಎನ್ನುವುದು ಸರಿಯಲ್ಲ. ಯಾರು ಬಟ್ಟೆಯನ್ನು ಕೊಟ್ಟಿದ್ದಾರೆ ಮತ್ತು ಯಾರು ಸ್ಥಳವನ್ನು ತೋರಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿ . ಫೋಟೋದ ಮೇಲೆ ದಿನಾಂಕ ಮತ್ತು ಸಮಯ ಕಂಡು ಬರುತ್ತಿಲ್ಲ ಎನ್ನುವುದು ಸರಿ. ಪೊಲೀಸರ ಕೋರಿಕೆಯ ಮೇರೆಗೆ ನಾನು ನಿಂತು ಫೋಟೋ

**S.C.No. 34/2025**
**P.W. 3 (C.W.2 )**
**Date : 08.01.2026**

ತೆಗೆಸಿಕೊಂಡಿರುತ್ತೇನೆ ಎನ್ನುವುದು ಸರಿಯಲ್ಲ. ಪಂಚನಾಮೆಯ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುವುದು ಸರಿಯಲ್ಲ.

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**